## ಚೇತನ ಬಿಸಿನೆಸ್ ಸ್ಕೂಲ್‌ನ 12ನೇ ಸಂಸ್ಥಾಪನಾ ದಿನಾಚರಣೆ

# ಉದ್ಯಮಿ ಭರತ್ ಖಿಮ್ಜಿಯವರಿಗೆ 'ಚೇತನಶ್ರೀ' ಪ್ರಶಸ್ತಿ ಪ್ರದಾನ

ಹುಬ್ಬಳ್ಳಿ: ಇಲ್ಲಿನ ದ್ಯಾವಪ್ಪನವರ ಕೊರವಿ ಸಿದ್ದಾಳ (ಡಿಕೆಎಸ್) ಶಿಕ್ಷಣ ಸಂಸ್ಥೆಯ ಚೇತನ ಬಿಸಿನೆಸ್ ಸ್ಕೂಲ್‌ನ 12ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಪ್ರತಿವರ್ಷ ಕೊಡಮಾಡುವ ಚೇತನಶ್ರೀ ಪ್ರಶಸ್ತಿಯನ್ನು ಈ ಬಾರಿ ಹೆಸರಾಂತ ಹಿರಿಯ ಉದ್ಯಮಿ ಎ.ಕೆ.ಇಂಡಸ್ಟ್ರೀಸ್, ಬಿಡಿಕೆ ಸಂಸ್ಥೆಯ ಸಂಸ್ಥಾಪಕರು, ವಾಲ್ವ್ ಉತ್ಪಾದನೆಯನ್ನು ಜಾಗತಿಕ ಮಟ್ಟದಲ್ಲಿ ಖ್ಯಾತಿ ಗಳಿಸಿದ ಭರತ್ ಖಿಮ್ಜಿ ಅವರಿಗೆ ಇತ್ತೀಚೆಗೆ ಬಿಸಿನೆಸ್ ಸ್ಕೂಲ್ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಹಿರಿಯ ಉದ್ಯಮಿ 81 ವರ್ಷದ ಭರತ್ ಖಿಮ್ಜಿ ಅವರು, ವಾಲ್ವ್ ತಯಾರಿಕಾ ಉದ್ಯಮ ಕ್ಷೇತ್ರದಲ್ಲಿ ನಾನು ಜಾಗತಿಕ ಮಟ್ಟದಲ್ಲಿ ಯಶಸ್ಸು ಕಾಣಲು ಸಾಧ್ಯವಾಗಿದ್ದು, ಗುಣಮಟ್ಟ ಬಹಳ ಮುಖ್ಯವಾಗಿದೆ ಎಂದು ಹೇಳಿದರು.

ದಕ್ಷಿಣ ಆಫ್ರಿಕಾ, ಸ್ಪೇನ್, ರಷ್ಯಾ, ಕೊರಿಯಾ, ಜಪಾನ್ ಸೇರಿದಂತೆ ಅನೇಕ ರಾಷ್ಟ್ರಗಳಿಗೆ ನಮ್ಮ ಬಿಡಿಕೆ ಕಂಪನಿಯ ಉತ್ಪನ್ನಗಳು ಪೂರೈಕೆಯಾಗಿವೆ. ಅಲ್ಲಿನ ವಾಲ್ವ್ ತಯಾರಿಕಾ ಉದ್ಯಮಿಗಳು ನಮ್ಮ ಕಂಪನಿಗೆ ಭೇಟಿ ನೀಡಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ ಎಂದರು.

ಚೇತನಶ್ರೀ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಡಿಕೆಎಸ್ ಶಿಕ್ಷಣ ಸಂಸ್ಥೆ ಪರಿಶ್ರಮಿಗಳು, ದೂರದೃಷ್ಟಿಯುಳ್ಳ ಉತ್ಸಾಹಿಗಳು ಕಟ್ಟಿರುವ ಸಂಸ್ಥೆ. ವಿದ್ಯಾರ್ಥಿಗಳ ಸಂಖ್ಯೆ ಎಷ್ಟೇ ಇರಲಿ, ಶಿಕ್ಷಣದ ಗುಣಮಟ್ಟದ ವಿಷಯದಲ್ಲಿ ರಾಜೀ ಮಾಡಿಕೊಂಡಿಲ್ಲ ಎಂದು ಪ್ರಶಂಸಿಸಿದರು.

ಅಧ್ಯಕ್ಷತೆವಹಿಸಿದ್ದ ಪಾಲಿಕೆ ಸದಸ್ಯ ಹಾಗೂ ಡಿಕೆಎಸ್ ಸಂಸ್ಥೆ ಕಾರ್ಯಾಧ್ಯಕ್ಷ ರಾಜಣ್ಣ ಕೊರವಿ ಮಾತನಾಡಿ, ಗುಣಮಟ್ಟದ ಶಿಕ್ಷಣ ಕೊಡುವುದೊಂದೇ ನಮ್ಮ ಸಂಸ್ಥೆಯ ಧ್ಯೇಯ. ಅಂತೆಯೇ ನಮ್ಮ ಸಂಸ್ಥೆ ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ ಎಂದು ಹೇಳಿದರು.

ಇದೇ ವೇಳೆ ವಿಜಯಪುರ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಶ್ರೀಗಳಿಗೆ ಗುರುವಂದನೆ ಸಲ್ಲಿಸಲಾಯಿತು. ಪಿಎಚ್‌ಡಿ ಪಡೆದ ಡಾ.ಅನಿರುದ್ಧ ಅವರನ್ನು ಸನ್ಮಾನಿಸಲಾಯಿತು. ಪ್ರೊ.ಶ್ವೇತಾ ಸಜ್ಜನರ ಅವರು ಬರೆದ ಭಾವನಾತ್ಮಕ ಬುದ್ಧಿಮತ್ತೆ ಪುಸ್ತಕವನ್ನು ಸಭಾಪತಿ ಬಸವರಾಜ ಹೊರಟ್ಟಿ ಅವರು ಬಿಡುಗಡೆ ಮಾಡಿದರು. ಪ್ರೊ. ಜಗದೀಶ ದ್ಯಾವಪ್ಪನವರ, ಡಾ. ರಮಾಕಾಂತ ಕುಲಕರ್ಣಿ ಅವರು ಶ್ರೀ ಸಿದ್ದೇಶ್ವರ ಶ್ರೀಗಳಿಗೆ ಗೌರವ ನುಡಿನಮನ ಸಲ್ಲಿಸಿದರು. ನಿರ್ದೇಶಕರಾದ ಪ್ರೊ. ವಿಶ್ವನಾಥ ಕೊರವಿ ಅವರು ಪ್ರಾಸ್ತಾವಿಕ ಮಾತನಾಡಿದರು. ಡಾ.ಅಶೋಕ ವಡಕನ್ನವರ ಸ್ವಾಗತಿಸಿದರು. ಡಾ. ಎಂ.ಎನ್. ಮಾಣಿಕ್ ವಂದಿಸಿದರು. ಪ್ರೊ.ಕೌಜಲಗಿ ನಿರೂಪಿಸಿದರು.

ಟೆಂಗಿನಕಾಯಿ ಜಗದೀಶ, ಡಾ. ಶಂಭು ಹೆಗಡಾಳ , ಪ್ರೊ. ಮಹೇಶ ದ್ಯಾವಪ್ಪನವರ, ಪ್ರೊ. ಜಿ.ವಿ. ವಳಸಂಗ, ಪರಮೇಶ್ವರಪ್ಪ ದ್ಯಾವಪ್ಪನವರ, ಸುನೀಲ ಆಜೂರ, ಡಾ. ಪಾಂಗೆ, ಪ್ರೊ.ವಾಯ್. ಎನ್. ಅಣ್ಣಿಗೇರಿ, ಪ್ರೊ. ಬಿ.ಎಫ್. ಗಾಮನಗಟ್ಟಿ,



ಹುಬ್ಬಳ್ಳಿಯಲ್ಲಿ ಶುಕ್ರವಾರ ಡಿಕೆಎಸ್ ಶಿಕ್ಷಣ ಸಂಸ್ಥೆಯ ಚೇತನ ಬಿಸಿನೆಸ್ ಸ್ಕೂಲ್ 12ನೇ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ಉದ್ಯಮಿ, ಬಿಡಿಕೆ ಸಂಸ್ಥೆ ಸಂಸ್ಥಾಪಕ ಭರತ್ ಖಿಮ್ಜಿ ಅವರಿಗೆ 'ಚೇತನಶ್ರೀ' ಪ್ರಶಸ್ತಿಯನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರದಾನ ಮಾಡಿದರು. ರಾಜಣ್ಣ ಕೊರವಿ, ಪ್ರೊ, ಜಗದೀಶ ದ್ಯಾವಪ್ಪನವರ, ಡಾ. ವಿಶ್ವನಾಥ್ ಕೊರವಿ ಹಾಗೂ ಇತರರಿದ್ದರು.

## ಶಾಲಾ ಶತಮಾನೋತ್ತರ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಜೋಶಿ ಹೇಳಿಕೆ

# ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಮಗ್ರ ಕೌಶಲ್ಯಕ್ಕೆ ಒತ್ತು

**ಉಪ್ಪಿನಬೆಟಗೇರಿ:** 157 ವರ್ಷ ಪೂರೈಸಿರುವ ಉಪ್ಪಿನಬೆಟಗೇರಿ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಪ್ರಾಥಮಿಕ ಶಾಲೆಯು, ಅಕ್ಷರ ದಾಸೋಹದ ಮೂಲಕ ಈ ನಾಡಿಗೆ ಲಕ್ಷಾಂತರ ವಿದ್ಯಾರ್ಥಿಗಳನ್ನು ಕೊಡುಗೆಯಾಗಿ ನೀಡಿ ಇತಿಹಾಸದಲ್ಲಿ ನೆನಪಿಡುವಂತ ಕಾರ್ಯ ಮಾಡಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಗ್ರಾಮದಲ್ಲಿ ರವಿವಾರ ಜರುಗಿದ ಶಾಲಾ ಶತಮಾನೋತ್ತರ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಲಿತ ಶಾಲೆಗೆ ಹಾಗೂ ಕಲಿಸಿದ ಶಿಕ್ಷಕರಿಗೆ ಗೌರವ ಸಲ್ಲಿಸಲು, ಶಾಲೆಯ ಹಳೆಯ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರೆಲ್ಲರೂ ಸೇರಿ ಆಯೋಜಿಸಿರುವ ಈ ಕಾರ್ಯಕ್ರಮ ಅವಿಸ್ಮರಣೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳಿಗೆ ಸಮಗ್ರ ಕೌಶಲ್ಯ ಬೆಳವಣಿಗೆ ಅವಶ್ಯಕತೆ ಇರುವ ಅಂಶಗಳನ್ನು ಅಳವಡಿಕೆ ಮಾಡಿದೆ. ದೇಶದ ಅಭಿವೃದ್ಧಿಗೆ ಕೌಶಲ್ಯ ಅಗತ್ಯವಾಗಿದೆ ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ 'ಸ್ಮರಣ ಸಂಚಿಕೆ' ಬಿಡುಗಡೆ ಮಾಡಿ ಮಾತನಾಡಿ, ಎರಡು ತಲೆಮಾರುಗಳಿಂದ ಶಿಕ್ಷಣ ನೀಡುತ್ತಿರುವ ಈ ಶಾಲೆಯ ಶತಮಾನೋತ್ತರ




ಉಪ್ಪಿನಬೆಟಗೇರಿಯಲ್ಲಿ ನಡೆದ ಶಾಲಾ ಶತಮಾನೋತ್ತರ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿದರು.

ನೆನಪಿಗಾಗಿ ಒಂದು ಭವ್ಯವಾದ ಭವನ ನಿರ್ಮಿಸುವಂತೆ ಅವರು ಸಲಹೆ ನೀಡಿ, ಈ ಶಾಲೆ ರಾಜ್ಯಕ್ಕೆ ಮಾದರಿಯಾಗಲಿ ಎಂದು ಹಾರೈಸಿದರು.

ಗ್ರಾಮದ ಮೂರುಸಾವಿರ ವಿರಕ್ತಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ, ಮುನವಳ್ಳಿ ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಹಾಗೂ ಮಮದಾಪುರ ವಿರಕ್ತ ಮಠದ

ಆಶೀರ್ವಚಿಸಿದರು. ಶಾಲಾ ಶತಮಾನೋತ್ತರ ಸುವರ್ಣ ಮಹೋತ್ಸವ ಸಮಿತಿ ಹಾಗೂ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ತವನಪ್ಪ ಅಷ್ಟಗಿ ಅಧ್ಯಕ್ಷತೆ ವಹಿಸಿ ಹಾಗೂ ಮುಖ್ಯ ಅತಿಥಿಗಳಾಗಿ ಶಾಸಕ ಅಮೃತ ದೇಸಾಯಿ ಮತ್ತು ಮಾಜಿ ಶಾಸಕಿ ಸೀಮಾ ಮಸೂತಿ, ಬಿಇಓ ಮೋಹನ ದಂಡಿನ ಮಾತನಾಡಿದರು.

ಪರಾಂಡೆ, ಚನಬಸಪ್ಪ ಮಸೂತಿ, ಕಲ್ಲಪ್ಪ ಮುಡಕಲಕಟ್ಟಿ, ರಾಮಲಿಂಗಪ್ಪ ನವಲಗುಂದ, ಮಲ್ಲಪ್ಪ ಅಷ್ಟಗಿ, ಶ್ರೀಶೈಲ ಮುಡಕಲಕಟ್ಟಿ, ಶಿವಾನಂದ ಕೇಸರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಡಿಡಿಪಿಐ ಗಿರೀಶ ಪದಕಿ, ಸುರೇಶ ಹುಗ್ಗಿ, ಶಿಕ್ಷಕರ ಸಂಘದ ಮುಖಂಡ

ದೀವಟಗಿ ಕಾರ್ಯಕ್ರಮ ನಿರ್ವಹಿಸಿದರು.

ಕಾರ್ಯಕ್ರಮದ ಅಂಗವಾಗಿ ಬೆಳಗ್ಗೆ ಶಾಲಾ ಆವರಣದಲ್ಲಿ ಗ್ರಾಪಂ ಅಧ್ಯಕ್ಷೆ ಸಾಯಿರಾಬಾನು ಲಾಲ್ಮೀಯಾ ಶಾಲಾ ಧ್ವಜಾರೋಹಣ ನೆರವೇರಿಸಿದರು. ನಂತರ ಭುವನೇಶ್ವರಿ ದೇವಿಯ ಮೆರವಣಿಗೆಗೆ ಗ್ರಾಮದ ಹಿರಿಯ ವೀರಣ್ಣಾ ಪರಾಂಡೆ ಚಾಲನೆ ನೀಡಿದರು. ಊರಿನ ಎಲ್ಲ ಶಾಲಾ ಮಕ್ಕಳ ಉಪಸ್ಥಿತಿಯಲ್ಲಿ ಈ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ಮತ್ತೆ ಶಾಲೆಗೆ ಮರಳಿತು. ಮಧ್ಯಾಹ್ನದ 'ನೆನೆ ನೆನೆ ಆ ದಿನ' ಕುರಿತು ರಾಯಚೂರು ಜಿಲ್ಲಾ ನ್ಯಾಯಾಧೀಶರಾದ ಮಹಾದೇವ ಕುಡುವಕ್ಕಲಿಗೇರ ಹಾಗೂ ಅನೇಕರು ವಿಷಯ ಮಂಡಿಸಿದರು. ಸಂಜೆ 'ಉಪ್ಪಿನಬೆಟಗೇರಿ ಗ್ರಾಮದ ಹಿರಿಮೆ ಗರಿಮೆ' ಚಿಂತನಾ ಗೋಷ್ಠಿಯಲ್ಲಿ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಈ ಶಾಲೆಯ ನಿವೃತ್ತ ಶಿಕ್ಷಕ ಎನ್.ಟಿ. ಉಪಾಧ್ಯೆ ಹಾಗೂ ಶಿಕ್ಷಕ ರಂಗನಾಥ ವಾಲ್ಮೀಕಿ ವಿಷಯ ಮಂಡಿಸಿದರು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಹಾಸ್ಯ ಸಂಜೆ ಜರುಗಿತು.